(ಉ) ಉದ್ಭವಿಸುವುದಿಲ್ಲ.

ಶ್ರೀ ಪ್ರತಾಪ ಚಂದ್ರಶೆಟ್ಟಿ.—ಅಧ್ಯಕ್ಷರೇ, ಖಾಲಿ ಇರತಕ್ಕಂಥ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಾ? ಜಿ. ವಿ. ಕೆ. ರಾವ್ ಅವರ ವರದಿ ಯಾವಾಗ ಬರುತ್ತದೆ? ಎಷ್ಟು ಸಮಯದಲ್ಲಿ ಬರುತ್ತದೆ?

ಶ್ರೀ ಎಸ್. ರೇವಣ್ಣ.—೧೪೬ ಹುದ್ದೆಗಳಲ್ಲಿ ವೈದ್ಯಾಧಿಕಾರಿಗಳು ೧೨೨–೮ ಸಹಾಯಕ ಬ್ಯಾಧ್ಯಾಪಕರು ಒಟ್ಟು ೧೪೬ ಹುದ್ದೆ ಖಾಲಿ ಇವೆ. ಅಂತಿಮವಾಗಿ ವರದಿ ಶೀಘ್ರದಲ್ಲಿಯೇ ಪರಬಹುದೆಂದು ನಿರೀಕ್ಷೆ ಮಾಡುತ್ತಿದ್ದೇನೆ

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಈ ರೀತಿಯಲ್ಲಿ ಪ್ರತಿ ವರ್ಷ ಕೇಳುತ್ತಾ ಬಂದಿದ್ದೇವೆ. ಹೊಸದಾಗಿ ಪಶುವೈದ್ಯ ಕಾಲೇಜುಗಳನ್ನು ತೆರೆಯುವುದಕ್ಕೆ ಖಾಸಗೀಯವರು ಬಂದರೆ ಅವರಿಗೆ ಅನುಮತಿ ಕೊಡುತ್ತೀರಾ?

ಶ್ರೀ ಎಸ್. ರೇವಣ್ಣ.—ಅಂತಿಮ ವರದಿ ಇನ್ನೂ ಬಂದಿಲ್ಲ. ಬಂದ ತಕ್ಷಣ ಖಾಸಗೀಯವರಿಗೆ ಕೊಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಪ್ರತಾಪ ಚಂದ್ರ ಶೆಟ್ಟಿ.—ಈಗ ರಾಜ್ಯದಲ್ಲಿ ನಿರುದ್ಯೋಗಿ ಪದವೀಧರರು ಇರುವಾಗ ಅವರನ್ನು ಭರ್ತಿಮಾಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ.

ಶ್ರೀ ಎಸ್. ರೇವಣ್ಣ.—ನಮಗೆ ವರದಿ ಬಂದಿರುವ ಪ್ರಕಾರ ಪಾಸಾಗಿ ಹೊರಗೆ ಬಂದ ಪದವೀಧರರನ್ನು ಕೆ. ಡಿ. ಡಿ. ಸಿ. ಯವರು ನೇಮಕ ಮಾಡಿಕೊಂಡಿದ್ದಾರೆ ಮುಂದೆ ಉತ್ತೀರ್ಣರಾಗಿ ಬರತಕ್ಕವರನ್ನು ಭರ್ತಿ ಮಾಡುತ್ತೇನೆ.

ಶ್ರೀ ಪ್ರತಾಪ ಚಂದ್ರ ಶೆಟ್ಟಿ.—ಆ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಏನಾದರೂ ಅರ್ಜಿಗಳನ್ನು ಕರೆದಿದ್ದೀರಾ?

ಶ್ರೀ ಎಸ್. ರೇವಣ್ಣ.—ಆ ವಿಚಾರ ನನಗೆ ಗೊತ್ತಿಲ್ಲ.

ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯದ ಸ್ಥಾಪನೆ.

೪೨೩. (೯೪೪) ಶ್ರೀ ಡಿ. ಜಿ. ಬಸವನಗೌಡರವರ (ಹೊನ್ನಾಳಿ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

೧೯೮೪ನೇ ಸಾಲಿನಿಂದ ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಸರ್ಕಾರದವರು ಯೋಚಿಸಿದ್ದಾರೆಯೆ ಮತ್ತು ಕಳೆದ ವರ್ಷ ಸರ್ಕಾರದವರು ಕೊಟ್ಟ ಭರವಸೆಯನ್ನು ಈಡೇರಿಸಲಾಗುವುದೇ?

ಶ್ರೀ ಬಿ. ರಾಚಯ್ಯ (ಮಾನ್ಯ ವಿದ್ಯಾಮಂತ್ರಿಯವರು).—ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ವಿಶ್ವವಿದ್ಯಾನಿಲಯಗಳ ಧನಸಹಾಯ ಆಯೋಗದವರೊಡನೆ ಚರ್ಚಿಸಿ ಯೋಚಿಸಲಾಗುವುದು.

ಶ್ರೀ ಡಿ. ಜಿ. ಬಸವನಗೌಡ.—ಸ್ವಾಮಿ, ನಮ್ಮ ಬೇಡಿಕೆ ಅನೇಕ ವರ್ಷಗಳಿಂದ ಇದೆ. ತಾವು ವಿಶ್ವವಿದ್ಯಾನಿಯದ ಧನ ಸಹಾಯ ಆಯೋಗದವರೊಡನೆ ಚರ್ಚಿಸಿ ಇದನ್ನು ಬೇಗನೆ ಕೈಗೊಳ್ಳುತ್ತೀರಾ? ನನಗೆ ತಿಳಿದು ಬಂದಿರುವ ಪ್ರಕಾರ ಎಂಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಅವರು ಅದನ್ನು ಪರಿಶೀಲಿಸುವುದಾಗಿ ತಿಳಿದು ಬಂದಿದೆ. ಆದುದರಿಂದ ತಾವು ೮ ಕೋಟಿ ರೂಪಾಯಿಗಳನ್ನು ವಿನಿಯೋಗಿಸುವುದರ ಬಗ್ಗೆ ಪರ್ಯಾಲೋಚನೆ ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ.—ಈಗ ಅಲ್ಲಿ ಪೋಸ್ಟ್ ಗ್ರಾಜುಯೇಟ್ ಸೆಂಟರ್ ಏನಿದೆ. ಅದಕ್ಕೆ ಸುಮಾರು ೧೮ ಲಕ್ಷ ರೂಪಾಯಿಗಳ ಖರ್ಚು ಬರುತ್ತಿದೆ. ಆ ಬಗ್ಗೆ ಅಭಿವೃದ್ಧಿ ಪಡಿಸುವುದಕ್ಕೆ ಕೆಲಸ ಪ್ರಾರಂಭವಾಗಿದೆ. ಯು. ಜಿ. ಸಿ. ಯವರಿಂದ ಹಣ ಪಡೆದುಕೊಂಡ ನಂತರ ಇನ್ನೂ ಉತ್ತಮ ಪಡಿಸುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಡಿ. ಜಿ. ಬಸವನಗೌಡ.—ಮುಂದಿನ ವರ್ಷವಾದರೂ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಂಗಳೂರು ಮತ್ತು ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಸ್ವಾಯತ್ತತೆ ಪ್ರಕಾರ ನಾವು ಈಗಾಗಲೇ ೨ ಕೋಟಿ ರೂ.ಗಳ ಹಣವನ್ನು ಖರ್ಚು ಮಾಡಿದ್ದೇವೆ. ಅವರು ಹೇಳಿದಹಾಗೆ ವಿಶ್ವವಿದ್ಯಾನಿಲಯದ ಕಾಯಿದೆಗೆ ತಿದ್ದುಪಡಿಯನ್ನು ತಂದಿದ್ದೇವೆ. ಯು. ಜಿ. ಸಿ. ಯವರಿಗೆ ನಾವು ಒಂದು ಪತ್ರ ಬರೆದು ಅಲ್ಲಿಂದ ಒಂದು ಟೀಮ್ ಕಳುಹಿಸಿಕೊಟ್ಟು ಗ್ರಾಂಟನ್ನು ಕೊಡುವ ಬಗ್ಗೆ ಹೇಳಿದ್ದೇವೆ. ಆದರೆ ಅವರಿಂದ ಇಲ್ಲಿಯವರೆಗೆ ಉತ್ತರ ಬರಲಿಲ್ಲ. ಅದಕ್ಕೋಸ್ಕರ ಅವರ ಹತ್ತಿರ ಹೋಗಿ ಚರ್ಚೆ ಮಾಡಿ, ಯಾವ ಹಂತದಲ್ಲಿದೆ ಎಂಬುದನ್ನು ನೋಡಿ, ಮುಂದಿನ ವ್ಯವಸ್ಥೆ ಬಗ್ಗೆ ಯೋಚನೆ ಮಾಡೋಣ.

ರಾಜ್ಯದಲ್ಲಿರುವ ಜಾನುವಾರುಗಳ ಕಸಾಯಿಖಾನೆಗಳು

೪೨೪ (೧೧೮೦) ಶ್ರೀ ಮಲ್ಲಾರಗೌಡ ಎಸ್. ಪಾಟೀಲ (ಸಂಕೇಶ್ವರ).—ಮಾನ್ಯ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಕರ್ನಾಟಕದಲ್ಲಿ ಪ್ರತಿದಿನ ಸರಾಸರಿ ಎಷ್ಟು ದನಗಳನ್ನು ವಧೆ ಮಾಡಲಾಗುವುದು.

(ಆ) ಕರ್ನಾಟಕದಲ್ಲಿ ಲೈಸನ್ಸ್ ಪಡೆದ ಎಷ್ಟು ಕಸಾಯಿ ಖಾನೆಗಳಿವೆ. ಅವು ಯಾರ ವಶಕ್ಕೊಳಪಟ್ಟಿದೆ.

(ಇ) ಹಸುಗಳನ್ನು ವಧೆ ಮಾಡದಿರಲು ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶು ಸಂಗೋಪನಾ ಪಶು ವೈದ್ಯಕೀಯ ಹಾಗೂ ತೋಟಗಾರಿಕೆ ಸಚಿವರು).—

(ಅ) ೨೯೪.

(ಆ) ಕಸಾಯಿಖಾನೆಗಳು ೬೬೩ ಅವು ಆಯಾ ನಗರಸಭೆ ಮತ್ತು ಪುರಸಭೆಗಳ ಅಧೀನದಲ್ಲಿವೆ.

(ಇ) ಕರ್ನಾಟಕದ ಗೋಹತ್ಯಾ ನಿರೋಧ ಮತ್ತು ಜಾನುವಾರು ಸಂರಕ್ಷಣಾ ಅಧಿನಿಯಮ ೧೯೬೪ರ ಪ್ರಕಾರ ಹಸುಗಳ ಮತ್ತು ಕರುಗಳ ಹಾಗೂ ಎಮ್ಮೆಗಳ ವಧೆ ನಮ್ಮ ರಾಜ್ಯದಲ್ಲಿ ನಿಷೇಧಿಸಲ್ಪಟ್ಟಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಪ್ರಶ್ನೆಗೆ ೨೯೪ ಎಂದು ಹೇಳಿದ್ದಾರೆ. ಒಟ್ಟು ೬೬೩ ಕಸಾಯಿ ಖಾನೆಗಳಿವೆ ಎಂದು ಹೇಳಿದ್ದಾರೆ ಆದರೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರತಕ್ಕದ್ದು ಸರಿಯಲ್ಲ. ಯಾರೋ ಒಬ್ಬ ಅಧಿಕಾರಿಗಳು ಉತ್ತರ ಬೆರೆದುಕೊಡುತ್ತಾರೆಂದು ಅದನ್ನು ನೋಡಿ, ಇಲ್ಲಿ ಸರಿಯಾದ ಉತ್ತರವನ್ನು ಕೊಡದೇ ಹೋದರೆ ಅದು ಸರಿಯಲ್ಲ. ಕರ್ನಾಟಕ ರಾಜ್ಯದಲ್ಲಿ ನವಂಗೆ ಗೊತ್ತಿರುವ ಹಾಗೆ ಅಂಕಿಅಂಶಗಳನ್ನು ತೆಗೆದುಕೊಂಡರೆ ಇದು ಬಹಳ ಹೆಚ್ಚಾಗುತ್ತದೆ. ಹೀಗಾದರೆ ಅನಿಮಲ್ ಹಸ್‌ಬೆಂಡರಿ ಅಭಿವೃದ್ಧಿ ಯಾಗುತ್ತದೆಯೇ ? ಇದು ಬಹಳ ಮಹತ್ವವಾದ ಪ್ರಶ್ನೆ ಇದೆ. ಯಾರ ರೈತಾಪಿ ಜನರಿದ್ದಾರೆ ಅವರ ಮನಸ್ಸಿಗೆ ನೋವು ಆಗುವ ಪ್ರಶ್ನೆ ಇದು. ಆ ದೃಷ್ಟಿಯಿಂದ ಬೆಂಗಳೂರು ನಗರ ಮುನಿಸಿಪಾಲಿಟಿ ಕಾರ್ಪೊರೇಷನ್‌ನಲ್ಲಿ ಎಷ್ಟು ಕಸಾಯಿ ಖಾನೆಗಳಿವೆ ? ಬೆಳಗಾಂನಲ್ಲಿ ಕಸಾಯಿ ಖಾನೆಗಳು ಎಷ್ಟಿವೆ ? ಯಾವ ಹಂತದಲ್ಲಿವೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕು. ಯಾವ ಕಸಾಯಿಖಾನೆಯಲ್ಲಿ ಹಸುಗಳನ್ನು ಕಡಿಯುತ್ತಿದ್ದಾರೆ ಅಂಥವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಸುಮಾರು ೭೨,೦೦೦ ಗೋಹತ್ಯೆ ಮಾಡಿ ದನಗಳನ್ನು ಕಡಿಯುತ್ತಿದ್ದಾರೆ. ಇದರ ಬಗ್ಗೆ ನಿರ್ದಿಷ್ಟವಾದ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳುತ್ತೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಬೆಳಗಾಂನ ಅಂಕಿಸಂಖ್ಯೆ ನನ್ನ ಹತ್ತಿರ ಇಲ್ಲ. ಬೆಂಗಳೂರಿನದು ಮಾತ್ರ ನನ್ನ ಹತ್ತಿರ ಇದೆ. ಬೆಂಗಳೂರಿನ ಪಶು ಆಹಾರ ನಿಗಮದ ಆಶ್ರಯದಲ್ಲಿ